# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 861 (820) |
| ಸದಸ್ಯರ ಹೆಸರು | : ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 15.12.2025 |
| ಉತ್ತರಿಸುವ ಸಚಿವರು | : ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸ್ತುತ ಯಾವ ಯಾವ ಇಲಾಖೆಯ ಯಾವ ಯಾವ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ಜವಾಬ್ದಾರಿಯನ್ನು ನೀಡಲಾಗುತ್ತಿದೆ; | 2025ನೇ ವರ್ಷದಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆ / ನಿಗಮ / ಮಂಡಳಿಗಳಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಕೆಳಕಂಡಂತೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. |

| ಕ್ರ. ಸಂ | ಇಲಾಖೆ/ ನಿಗಮ/ ಮಂಡಳಿಯ ಹೆಸರು | ಹುದ್ದೆಗಳ ಒಟ್ಟು ಸಂಖ್ಯೆ ಮತ್ತು ಹುದ್ದೆಯ ಹೆಸರು |
|---|---|---|
| 1) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | **25 ಹುದ್ದೆಗಳು** ಪ್ರಥಮ ದರ್ಜೆ ಸಹಾಯಕರು (ಪ್ರಥಮ ದರ್ಜೆ ಕೋರ್ಟ್ ಕ್ಲರ್ಕ್ / ರೆವಿನ್ಯೂ ಇನ್ ಪೆಕ್ಟರ್) / ದ್ವಿತೀಯ ದರ್ಜೆ ಸಹಾಯಕರು. |
| 2) | ಕರ್ನಾಟಕ ಸೋಪ್ಸ್ & ಡಿಟರ್ಜೆಂಟ್ಸ್ ಲಿಮಿಟೆಡ್ (KSDL) | **18 ಹುದ್ದೆಗಳು** ಕಿರಿಯ ಅಧಿಕಾರಿ (ಗುಣ ಮತ್ತು ಆಶ್ವಾಸನೆ / ಉತ್ಪಾದನೆ ಮತ್ತು ನಿರ್ವಹಣೆ / ಸಾಮಗ್ರಿ / ಉಗ್ರಾಣ ವಿಭಾಗ / ಮಾರುಕಟ್ಟೆ) / ಮಾರಾಟ ಪ್ರತಿನಿಧಿ (ಮಾರುಕಟ್ಟೆ) / ಆಪರೇಟರ್ (ಸಮಿಸ್ಕಿಲ್ಡ್). |
| 3) | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (RGUHS) | **44 ಹುದ್ದೆಗಳು** ಜೂನಿಯರ್ ಪ್ರೋಗ್ರಾಮರ್ / ಸಹಾಯಕ (ಸಿವಿಲ್) / ಸಹಾಯಕ ಗ್ರಂಥಪಾಲಕರು / ಸಹಾಯಕ / ಕಿರಿಯ ಸಹಾಯಕ. |
| 4) | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (KKRTC) | **316 ಹುದ್ದೆಗಳು** ಸಹಾಯಕ ಲೆಕ್ಕಿಗ / ನಿರ್ವಾಹಕ (ಕಂಡಕ್ಟರ್). |
| 5) | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC) | **19 ಹುದ್ದೆಗಳು** ಸಹಾಯಕ ಸಂಚಾರ ನಿರೀಕ್ಷಕ (Assistant Traffic Inspector). |
| 6) | ಕೃಷಿ ಮಾರಾಟ ಇಲಾಖೆ | **180 ಹುದ್ದೆಗಳು** ಸಹಾಯಕ ಅಭಿಯಂತರರು (ಸಿವಿಲ್) / ಕಿರಿಯ ಅಭಿಯಂತರರು (ಸಿವಿಲ್) / ಮಾರುಕಟ್ಟೆ ಮೇಲ್ವಿಚಾರಕರು / ಪ್ರಥಮ ದರ್ಜೆ ಸಹಾಯಕರು / |

| | | | | |
|---|---|---|---|---|
| | | | | ದ್ವಿತೀಯ ದರ್ಜೆ ಸಹಾಯಕರು / ಮಾರಾಟ ಸಹಾಯಕರು. |
| | | 7) | ತಾಂತ್ರಿಕ ಶಿಕ್ಷಣ ಇಲಾಖೆ | **93 ಹುದ್ದೆಗಳು**<br>ಪ್ರಥಮ ದರ್ಜೆ ಸಹಾಯಕರು / ದ್ವಿತೀಯ ದರ್ಜೆ ಸಹಾಯಕರು. |
| | | 8) | ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) | **10 ಹುದ್ದೆಗಳು**<br>ಗ್ರಂಥಪಾಲಕರು. |
| | | 9) | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (KSSIDC) | **44 ಹುದ್ದೆಗಳು**<br>ವ್ಯವಸ್ಥಾಪಕರು / ಸಹಾಯಕ ವ್ಯವಸ್ಥಾಪಕರು / ಹಿರಿಯ ಸಹಾಯಕರು / ಕಿರಿಯ ಸಹಾಯಕರು / ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್) / ಸಹಾಯಕ ಅಭಿಯಂತರರು (ಸಿವಿಲ್ / ವಿದ್ಯುತ್). |
| | | 10) | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB) | **224 ಹುದ್ದೆಗಳು**<br>ಸಹಾಯಕ ಅಭಿಯಂತರರು (ಸಿವಿಲ್ / ಎಲೆಕ್ಟ್ರಿಕಲ್ / ಮೆಕ್ಯಾನಿಕಲ್ / ಕಂಪ್ಯೂಟರ್ ಸೈನ್ಸ್) / ಕಿರಿಯ ಅಭಿಯಂತರರು (ಸಿವಿಲ್ / ಎಲೆಕ್ಟ್ರಿಕಲ್ / ಮೆಕ್ಯಾನಿಕಲ್) / ಸಹಾಯಕ / ಕಿರಿಯ ಸಹಾಯಕ / ಮಾಪನ ಓದುಗ (Meter Reader) / ಎರಡನೇ ದರ್ಜೆ ಉಗ್ರಾಣಪಾಲಕ. |
| | | 11) | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (NWKRTC) | **33 ಹುದ್ದೆಗಳು**<br>ಸಹಾಯಕ ಆಡಳಿತಾಧಿಕಾರಿ / ಸಹಾಯಕ ಲೆಕ್ಕಾಧಿಕಾರಿ / ಸಹಾಯಕ ಕಾನೂನು ಅಧಿಕಾರಿ / ಸಹಾಯಕ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ / ಸಹಾಯಕ ತಾಂತ್ರಿಕ ಶಿಲ್ಪಿ / ಸಹಾಯಕ ಸಂಚಾರ ವ್ಯವಸ್ಥಾಪಕ (ಹಾಗೂ ಆಂತರಿಕ ನೇಮಕಾತಿಯ ಹುದ್ದೆಗಳು). |
| ಆ) | ಕರ್ನಾಟಕ ಲೋಕಸೇವಾ ಆಯೋಗದ ಮಾದರಿಯಲ್ಲೇ ಪರೀಕ್ಷೆ ನಡೆಸುವುದರ ಜೊತೆಗೆ ದಾಖಲಾತಿ ಪರಿಶೀಲನೆ ಮತ್ತು ಅಂತಿಮ ಆಯ್ಕೆ ಪಟ್ಟಿ ಸಮೇತ ಫಲಿತಾಂಶ ಬಿಡುಗಡೆಯ ಜವಾಬ್ದಾರಿಯನ್ನೂ ಕೂಡ ಕೆಇಎಗೆ ನೀಡಬಹುದಲ್ಲವೇ; | ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ಇಲಾಖೆಯವರು ನೀಡುವ ನೇರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಮೆರಿಟ್ ಪಟ್ಟಿಯನ್ನು ಆಯಾ ಇಲಾಖೆಗೆ ಹಸ್ತಾಂತರಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.<br><br>ಮೀಸಲಾತಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ನಿರ್ಧರಿಸುವುದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಜವಾಬ್ದಾರಿಯಲ್ಲವೆಂದು ಮಾನ್ಯ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸಿರುತ್ತದೆ.<br><br>**WP. No. 49066/2017** "23. For the foregoing reasons, the questions that are formulated for consideration are | | |

| | | |
|---|---|---|
| ಇ) | ಅಂತಿಮ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಅವಕಾಶ ನೀಡದೆ ಇರಲು ಕಾರಣವೇನು; | answered declaring that the KEA cannot decide on the validity of Income and Caste Certificate, or exclude the Applicants from the Revised Provisional List, and that the appointing authority shall issue appointment orders only after the requisite Validity Certificates are issued by the competent authorities under the Karnataka Schedule Caste / Schedule Tribes another Backwards Classes (Reservation of appointments etc.,) Act 1990.<br><br>ನೇಮಕಾತಿಗೆ ಸಂಬಂಧಿಸಿದಂತೆ ಆಯಾ ಇಲಾಖೆಯ ಮುಖ್ಯಸ್ಥರೇ ಆಯ್ಕೆ ಪ್ರಾಧಿಕಾರವಾಗಿರುತ್ತಾರೆ. ಮೆರಿಟ್ ಆಧರಿಸಿ ಚಾಲ್ತಿಯಲ್ಲಿರುವ ಮೀಸಲಾತಿ ಅನುಸರಿಸಿ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಆಯ್ಕೆ ಪ್ರಕ್ರಿಯೆಯ ಜವಾಬ್ದಾರಿ (ಪ್ರಮುಖವಾಗಿ ಸಿಂಧುತ್ವ ಪ್ರಮಾಣ ಪತ್ರದ ಧೃಡೀಕರಣ) ನೇಮಕಾತಿ ಪ್ರಾಧಿಕಾರದ ಹಂತದಲ್ಲಿಯೇ ನಿರ್ವಹಿಸಬೇಕಾಗಿರುತ್ತದೆ. ಆದ್ದರಿಂದ ಅಂತಿಮ ಆಯ್ಕೆ ಪಟ್ಟಿ ಸಮೇತ ಫಲಿತಾಂಶ ಬಿಡುಗಡೆ ಮಾಡುವುದು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ. |
| ಈ) | ಗೊಂದಲ ಹಾಗೂ ವಿವಾದ ರಹಿತವಾಗಿ ಪಾರದರ್ಶಕತೆಯ ದೃಷ್ಟಿಯಿಂದ ಹೊಸ ಪರೀಕ್ಷಾ ಪದ್ಧತಿ, ಪರೀಕ್ಷೆ ಕ್ರಮಗಳನ್ನು ಅಳವಡಿಸಿಕೊಂಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದರ ಜೊತೆಗೆ ಅಂತಿಮ ಆಯ್ಕೆ ಪಟ್ಟಿಯನ್ನೂ ಸಹ ಬಿಡುಗಡೆ ಮಾಡುವ ಜವಾಬ್ದಾರಿಯನ್ನು ಯಾವ ಕಾಲಮಿತಿಯಲ್ಲಿ ನೀಡಲಾಗುವುದು; ಈ ಬಗ್ಗೆ ಸರ್ಕಾರದ ನಿಲುವೇನು? | ಉದ್ಭವಿಸುವುದಿಲ್ಲ. |

**ಸಂಖ್ಯೆ:ಇಡಿ 381 ಟಿಇಸಿ 2025**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು